ಇಯರ್... ಐ ಸ್ಟಾರ್ಟೆಡ್ ಟು ಫೀಲ್ ಸಂಥಿಗ್ ಸ್ಟ್ರೇಂಜ್..., ಇಟ್ ಇಸ್ ನಾಟ್ ಸೋ ಸಿಂಪಲ್. ವಿಷಯ ಅಷ್ಟು ಹಗುರವಿಲ್ಲ ಎನಿಸುತ್ತಿದೆ" ಎನ್ನುತ್ತಾ ಕೊನೆಯ ಸಾಲು ಹೇಳುವಾಗ ಶಾಲಿನಿ ಗದ್ಗದಿತರಾದರು.

ಶಾಲಿನಿಯವರ ಕಣ್ಣಂಚಲ್ಲಿ ನೀರು ತುಂಬಿದ್ದು ಕಂಡು ಕಸಿವಿಸಿಗೊಂಡ ಸುಮಾ, 'ಸ್ಸಾರಿ ಮೇಡಂ, ಡೋಂಟ್ ಮೈಂಡ್. ನಿಮ್ಮನ್ನು ನೋಯಿಸಲು ನಾನು ಮಕ್ಕಳ ವಿಚಾರ ಮಾತನಾಡಲಿಲ್ಲ. ಚುರುಕಾದ ಚೂಟಿ ಮಕ್ಕಳು ಮಂಕಾಗಿದ್ದು ಕಂಡು ಪರ್ಸನಲೀ ಬಹಳ ಪಿಚ್ಚೆನಿಸಿತ್ತು. ಡೇಲಿ ಒಂದೆರಡು ಗಂಟೆಗಳ ಟೈಂ ಮಾತ್ರ ನನ್ನೊಡನೆ ಕಳೆಯುವ ಮಕ್ಕಳ ಬಗ್ಗೆ ನನಗಿಂತಲೂ ಅಮ್ಮನಾಗಿರುವ ನಿಮಗೆ ಹೆಚ್ಚು ಗೊತ್ತಿರುತ್ತೆ ಎಂದು ಕೇಳಿದೆ. ಪ್ಲೀಸ್ ನೀವು ಬೇಸರಿಸದಿರಿ. ಡೋಂಟ್ ಫೀಲ್ ಬ್ಯಾಡ್' ಎಂದರು.

'ಛೇ ಛೇ ಹಾಗೇನಿಲ್ಲ. ಇಟ್ಸ್ ಓಕೆ ಸುಮಾ ಮೇಡಂ, ನನಗೆ ಬೇಸರವಿಲ್ಲ. ನೀವು ವೈಯಕ್ತಿಕವಾಗಿ ಮಕ್ಕಳ ಬಗ್ಗೆ ವಿಚಾರಿಸಿದ್ದು ಸರಿಯಾಗಿದೆ. ಇಟ್ ಮೇಡ್ ಮೀ ಟು ಥಿಂಕ್ ಸೀರಿಯಸ್ಲೀ... ನಾನು ಮಕ್ಕಳನ್ನು ಸರಿಯಾಗಿ ಗಮನಿಸಲು ಪ್ರಯತ್ನಿಸುತ್ತೇನೆ. ನಿಮ್ಮ ಕಾಳಜಿಗೆ ಮತ್ತೊಮ್ಮೆ ಧನ್ಯವಾದಗಳು. ಕಿಡ್ಸ್ ಆರ್ ವೇಯಿಟಿಂಗ್. ನಾನೀಗ ಹೊರಡುತ್ತೀನಿ. ಐ ವಿಲ್ ಟ್ರೈ ಟು ಫೈಂಡ್ ವಾಟ್ಸ್ ದೇರ್... ಅವರ ಮನಸ್ಸಲ್ಲಿ ಏನಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸ್ತೀನಿ. ನೀವು ಸಹ ನಿಮಗೆ ಸಮಯವಾದಾಗ ಬೇಸರಿಸದೇ ಮಕ್ಕಳ ಮನಸ್ಸನ್ನು ತಿಳಿದುಕೊಳ್ಳಲು ಟ್ರೈ ಮಾಡಿರೆಂದು ಕೋರುತ್ತೀನಿ' ಎಂದು ಅದೇ ಆರ್ದ್ರತೆಯಿಂದ ಕೇಳಿ ಕಾರಿನತ್ತ ಹೊರಟರು.

ಡ್ರೈವ್ ಮಾಡಿಕೊಂಡು ಮನೆಗೆ ಹಿಂದಿರುಗುವಾಗ ಶಾಲಿನಿ, ಮಕ್ಕಳೊಡನೆ ಮಾತನಾಡಲು ಪ್ರಯತ್ನಿಸಲಿಲ್ಲ. ಅವಳ ಮನಸ್ಸಿನಲ್ಲಿ ಸುಮಾ ಮೇಡಂ ಹೇಳಿದ ಮಾತುಗಳೂ, ಮಕ್ಕಳ ಈಗಿನ ಅನ್ಯಮನಸ್ಕತೆಯೂ, ಅದಕ್ಕೆ ಇರಬಹುದಾದ ಕಾರಣಗಳೂ, ತನ್ನ ತವರೂರಿನ ಈಚೆಗಿನ ಪರಿಸ್ಥಿತಿಯೂ ಒಂದೇ ಸಮನೆ ರಂಗಪ್ರವೇಶ ಮಾಡಿ ಥಕ್ಕ ಥೈ ಥೈ ಥಕ್ಕ ಕುಣಿಯುತ್ತಿದ್ದವು. ಆದರೆ ಸಡನ್ನಾಗಿ ಬ್ರೇಕ್ ಹಿಡಿದು ಚಕ್ರಕ್ಕೆ ಸಿಲುಕಿ ಸಾಯುತ್ತಿದ್ದ ಬೀದಿನಾಯಿಯನ್ನು ರಕ್ಷಿಸಿದಾಗಲೇ ಶಾಲಿನಿಗೆ ಇಷ್ಟು ಹೊತ್ತು ತಾನು ಯಾಂತ್ರಿಕವಾಗಿ ಕಾರು ಚಲಾಯಿಸುತ್ತಿದ್ದೆ ಎಂಬುದು ಅರಿವಿಗೆ ಬಂತು. ತಾನು ಇಷ್ಟೊಂದು ಅರಿವುಗೇಡಿ ಆಗಬಾರದೆಂದು ಮನಸ್ಸಿಗೆ ಬುದ್ಧಿ ಹೇಳಿಕೊಳ್ತಾ ಸಾವಕಾಶ ಮನೆ ತಲುಪಿದಳು.

ಮನೆ ತಲುಪಿದ ಮೇಲೆ ತಮ್ಮ ಕೊಠಡಿ ಸೇರಿದ ಮಕ್ಕಳು, ಕಾರಿನ ಚಕ್ರಕ್ಕೆ ಸಿಲುಕಬೇಕಿದ್ದ ಬೀದಿನಾಯಿಯ ಅದೃಷ್ಟ ಕುರಿತಾಗಲೀ, ತಾನು ಹಾಗೆ ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ತಮ್ಮಿಬ್ಬರ ತಲೆಗಳು ಮುಂದಿನ ಸೀಟಿಗೆ ಬಡಿದುದರ ಬಗ್ಗೆಯಾಗಲೀ, ನನ್ನ ಅಜಾಗರೂಕ ಡ್ರೈವಿಂಗ್ ಸುಧಾರಣೆಯ ಬಗ್ಗೆಯಾಗಲೀ ಯಾವುದೇ ಕಮೆಂಟ್ ಮಾಡದೇ ಇದ್ದುದ್ದು ಗಮನಿಸಿದ ಶಾಲಿನಿಗೆ ನಿಜಕ್ಕೂ ಪರಿಸ್ಥಿತಿಯ ಗಾಂಭೀರ್ಯ ಈಗ ಅರ್ಥವಾಯಿತು.

ಗಂಡ ಶರತ್ ಮನೆಗೆ ಬರೋದು ರಾತ್ರಿ ಹತ್ತರ ಅನಂತರವೇ ಆಗಿರುವುದರಿಂದ, ಈ ವಿಚಾರದ ಬಗ್ಗೆ ಫೋನ್‌ನಲ್ಲಿ ಮಾತನಾಡಿಕೊಂಡೇ ಮಕ್ಕಳಿಗೆ ತಿನ್ನಲು ಏನಾದರೂ ಸ್ನ್ಯಾಕ್ಸ್ ತಯಾರಿಸುವ ಎಂದು ಕೈಕಾಲು ಮುಖ ತೊಳೆಯಲು ಬಚ್ಚಲಿಗೆ ನಡೆದಳು.

ಶರತ್ ಸಾಮಾನ್ಯ ಕಚೇರಿಯ ಸಮಯದಲ್ಲಿ ಫೋನಿಗೆ ಸಿಗುವುದು ಅಪರೂಪ. ಇವತ್ತೂ ಹಾಗೆಯೇ "ಅಯ್ಯಾಂ ಇನ್ ಮೀಟಿಂಗ್... ಮೆಸೇಜ್ ಮೀ" ಎಂದು ಚುಟುಕು ಸಂದೇಶ ಕಳಿಸಿದ. ಆದರೆ ಹೇಳಬೇಕೆಂದಿರುವ ವಿಚಾರ ಸಂದೇಶದಲ್ಲಿ ಕಳುಹಿಸುವಷ್ಟು ಸರಳವಾಗಿ ಇರಲಿಲ್ಲವಾಗಿ, 'ನಥಿಂಗ್, ಕಮ್ ಸೂನ್' ಎಂದು ಟೈಪಿಸಿ ಸುಮ್ಮಗಾದಳು.

ರಂಜು–ಮೋನುವಿಗೆ ಈರುಳ್ಳಿ ಪಕೋಡ ಮತ್ತು ಜಾಮೂನು ಬಹಳ ಇಷ್ಟದ ತಿನಿಸುಗಳಾಗಿದ್ದವು. ಅದನ್ನೇ ಮಾಡಿಕೊಟ್ಟು ಅವರೊಡನೆ ಮಾತಿಗಿಳಿದು ಮನಸ್ಸಿನಲ್ಲೇನಿದೆ ಎಂದು ಅರಿಯಲು ಏಕೆ ಪ್ರಯತ್ನಿಸಬಾರದೆಂದು ಶಾಲಿನಿ ಈರುಳ್ಳಿ ಹೆಚ್ಚತೊಡಗಿದಳು. ಹೆಚ್ಚುತ್ತಿದ್ದಾಗ ಸುರಿದ ಕಣ್ಣೀರು ತವರು ಮನೆ ತಲುಪಿರುವ ಸ್ಥಿತಿಗೋ... ಬದಲಾದ ಮಕ್ಕಳ ಮನಸ್ಥಿತಿಗೆ ಮರುಗಿದ ಕಾರಣಕ್ಕೋ... ಗೊತ್ತಾಗಲಿಲ್ಲ. ಧಾರಾಕಾರ ಸುರಿಯಿತು. ಆದರೂ ಸಂಭಾಳಿಸಿಕೊಂಡು ಅರ್ಧಗಂಟೆಯೊಳಗೆ ತಿನಿಸು ತಯಾರಿಸಿ "ರಂಜು–ಮೋನೂ ಬಿಸಿಬಿಸಿ ಇರುವಾಗಲೇ ತಿನ್ನಬನ್ನಿರಿ" ಎಂದು ಮಕ್ಕಳನ್ನು ಕೂಗಿದಳು. ಮಕ್ಕಳ ಮುದುಡಿದ ಮನಸ್ಸು ತಿನಿಸಿನ ಆಸೆಗೆ ತುಸು ಮೆಲ್ಲನೆ ಅರಳಿದ್ದು ಶಾಲಿನಿಯ ಗಮನಕ್ಕೆ ಬಂದಿತು. ಪ್ರಬುದ್ಧಳಾಗಿ ನಡೆದುಕೊಳ್ಳುವ ಮಗಳೂ ಹಾಗೂ ಬಾಲ್ಯದ ಸಹಜ ತುಂಟಾಟವನ್ನು ಇನ್ನೂ ಅಪ್ಪಿಕೊಂಡಿರುವ ಮಗನೂ ಆಸೆಯಿಂದ ತಿನ್ನುವುದನ್ನೇ ನೋಡುತ್ತಿದ್ದವಳು, ಅವರೊಡನೆ ಮಾತಿಗಿಳಿಯುವ ನೆವ ಹುಡುಕುತ್ತಿದ್ದಳು. ಮಗ ಮೋನು ಮತ್ತೊಂದು ಜಾಮೂನಿಗೆ ಬೇಡಿಕೆ ಇಟ್ಟಾಗ ಶಾಲಿನಿಗೆ ತನ್ನ ದಾರಿ ಸುಸೂತ್ರವಾಯಿತು. "ಇನ್ನೊಂದು ಜಾಮೂನು ಬೇಕಂದ್ರೆ, ಅಮ್ಮಾಅಪ್ಪನ ಮೇಲೆ ಬೇಜಾರಾಗಿರೋದು ಏಕೆ ಅಂತ ಹೇಳಬೇಕು. ಇಲ್ಲಾ ಊರಲ್ಲೇನೋ ತಪ್ಪಾಗಿದೆ ಅದನ್ನಾದ್ರೂ ಹೇಳಬೇಕು. ಏಕಂದ್ರೆ ಈ ಬಾರಿ ಎಮ್ಮೆ ಕರು ಜೊತೆಗೆ ಕೆರೆಗೆ ಮೀಯಿಸಲು ಮಾವ ಕರೆದ್ಕೊಂಡು ಹೋಗಿಲ್ಲ, ಅಜ್ಜ ಹಲಸು ತಿನ್ನಿಸಿಲ್ಲ, ಅಜ್ಜಿ ಕಾಚಕ್ಕಿ ಹುರಿದುಕೊಟ್ಟಿಲ್ಲ, ಅದ್ಯಾವುದೂ ಅಲ್ಲ ಅಂದ್ರೆ ಅತ್ತೆ ಅಟ್ಟದ ತೊಲೆಗೆ ಹಗ್ಗ ಕಟ್ಟಿ ಜೋಕಾಲೆ ಹಾಕಿ ಕೊಟ್ಟಿಲ್ಲ... ಅಲ್ವಾ..?!" ಹೀಗೆ ಶಾಲಿನಿ ಮಕ್ಕಳಿಂದ ವಿಷಯ ಹೊರಗೆ ತೆಗೆಯೋಕೆ ಅವರಿಗೆ ಊರಿಗೆ ಹೋದಾಗ ಸಾಮಾನ್ಯವಾಗಿ ಇಷ್ಟವಾಗುತ್ತಿದ್ದ ಕೆಲವು ವಿಚಾರಗಳ ಪ್ರಸ್ತಾಪ ಮಾಡಿದಳು.

ಅಮ್ಮನಿಂದ ವಿಚಾರಣೆ ಶುರುವಾಗ್ತಿರೋದು ಗೊತ್ತಾಗುತ್ತಿದ್ದಂತೆ, ಸ್ವಲ್ಪ ದೊಡ್ಡವಳಾದ ರಂಜು ತಪ್ಪಿಸಿಕೊಂಡು ತನ್ನ ಕೋಣೆಗೆ ಹೋಗಲು ಮೆಲ್ಲನೆ ಮೇಲೆದ್ದಳು. ಮೋನಾ ಮಾತ್ರ ಪಕೋಡಾ ಜಾಮೂನು ಸವಿಯುತ್ತಿದ್ದ. ರಂಜು ಅವನಿಗೆ ಎದ್ದು ಬರುವಂತೆ ಕಣ್ಸನ್ನೆ ಮಾಡಿದಳು. ಅವನಿಗೆ ತಕ್ಷಣ ಅರ್ಥವಾಗಲಿಲ್ಲ. "ಮೋನು, ಆಗಲೇ ಯಾವುದೋ ಸಮ್ ನಿನಗೆ ಅರ್ಥವಾಗಲಿಲ್ಲ ಅಂದ್ಯಲ್ಲಾ ಬಾ ಹೇಳ್ಕೊಡ್ತೀನಿ. ಆಮೇಲೆ ಬಂದು ಡಿಸ್ಟರ್ಬ್ ಮಾಡಬೇಡ. ನಂಗೆ ಮಾಡಿಕೊಳ್ಳಲಿಕ್ಕೆ ಬಹಳ ಪ್ರಾಜೆಕ್ಟ್ಸ್, ಹೋಂವರ್ಕ್ಸ್ ಇದೆ" ಎಂದಳು. "ಏ... ನಾನ್ಯಾವಾಗ ನಿಂಗೆ ಅರ್ಥ ಆಗಲಿಲ್ಲ ಅಂತ ಕೇಳಿದೆ ಅಕ್ಕಾ..? ಮ್ಯಾಥ್ಸಲ್ಲಿ ಆ್ಯಮ್ ಬೆಟರ್ ದ್ಯಾನ್ ಯೂ..." ಎಂದು ರಾಗ ಎಳೆಯುತ್ತಾ, "ಮತ್ತೆ ಸುಮಾ ಟೀಚರ್ ಹತ್ರ ನಿಂಗೇನು ಹೋಂವರ್ಕ್ ಇಲ್ಲ ಅಂದ್ಯಲ್ಲಾ..?" ಎಂದು ಕೇಳುತ್ತಾ ರಂಜು ಮುಖ ನೋಡಿದ. ಅಕ್ಕನ ಮುಖದಲ್ಲಿದ್ದ ಅಸಮಾಧಾನ ಗೊತ್ತಾಗುತ್ತಿದ್ದಂತೇ ಅವಳು ಹಾಗೇಕೆ ತನ್ನನ್ನು ಕರೆದದ್ದೆನ್ನುವುದು ಮೋನುವಿಗೆ ಅರ್ಥವಾಯ್ತು.

ನಿಧಾನಕ್ಕೆ ಕೈಲಿದ್ದ ಅರ್ಧ ಜಾಮೂನು ಬಾಯಿಗೆ ಹಾಕಿಕೊಂಡು, ರಂಜು ಹಿಂದೆ ಮೆಲ್ಲನೆ ಎದ್ದು ಹೋಗುತ್ತಿದ್ದವನ ಕೈ ಹಿಡಿದು, "ಮೋನು, ನನಗೆ ಮಾತನಾಡೋದಿದೆ ಕೂರು" ಎಂದು ಶಾಲಿನಿ ಕೂಡಿಸಿಕೊಂಡಳು. ರಂಜುವನ್ನು ನೋಡಿ, ಗಂಭೀರವಾಗಿ, "ರಂಜು ನಿನಗೇನು ವಿಶೇಷವಾಗಿ ಹೇಳಬೇಕಾ...?" ಎಂದಳು. ವಿಧಿಯಿಲ್ಲದೇ ರಂಜುವೂ ಕುಳಿತಳು.

"ನಿಜ ಹೇಳಿ, ಏನಾಯ್ತು ಊರಲ್ಲಿ..? ಟೆಲ್ ಮಿ ದ ಟ್ರೂತ್. ಈ ಬಾರಿ ನೀವಿಬ್ಬರೇ ಖುಷಿಯಿಂದ ಹೋಗಿಬರುತ್ತೇವೆ ಎಂದು ಹೊರಟದ್ದಲ್ವಾ..? ಅಷ್ಟು ಹ್ಯಾಪಿಯಾಗಿ ಹೋದವರು ಬರುವಾಗ ಸಪ್ಪಗಾಗಿದ್ದು ಏಕೆ? ಏನಾಯ್ತು ಅಲ್ಲಿ..? ವಾಟ್ ಹ್ಯಾಪನ್ಡ್? ರಂಜು, ಹೋಗಿಬರುವಾಗ ಬಸ್ಸಿನಲ್ಲಿ

